**ದಿನಾಂಕಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಕೆ.ಎಸ್.ಬಿ ವಕೀಲರಿಂದಃ**

2. ನಾನು B.E. Mechanical Engineering ವಿದ್ಯಾಭ್ಯಾಸ ಮಾಡಿರುತ್ತೇನೆ. ಎದುರುದಾರ ಸಂಸ್ಥೆಯು ನನಗೆ ದಿ. 25.09.2013 ರಂತೆ ಕಾರಣ ಕೇಳಿ ನೋಟೀಸ್ ನ್ನು ಕೊಡಲಾಗಿರುತ್ತದೆ. ಸದರಿ ನೋಟೀಸ್ ನ ಕಚೇರಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಆರ್–1 ಎಂದು ಗುರುತಿಸಲಾಯಿತು. ನಿಆರ್–1 ಕ್ಕೆ ನಾನು ದಿ. 30.09.2013 ರಂದು ಉತ್ತರವನ್ನು ಕೊಟ್ಟಿರುತ್ತೇನೆ. ಸದರಿ ಉತ್ತರವನ್ನು ನೋಡುತ್ತಿದ್ದು ಅದನ್ನು ನಿಆರ್–2 ಎಂದು ಗುರುತಿಸಲಾಯಿತು. ನಿಆರ್–2 ರಲ್ಲಿ ಹೇಳಬೇಕಾದ ಎಲ್ಲಾ ನನ್ನ ಪ್ರತಿರಕ್ಷೆಗೆ ಬೇಕಾದ ಎಲ್ಲಾ ವಿಷಯಗಳನ್ನು ತಿಳಿಸಿರುತ್ತೇನೆ. ಈಗ ತೋರಿಸಿದ ಚಾರ್ಜ್ ಶೀಟ್ ಮತ್ತು ನೋಟೀಸ್ ನ ಪ್ರತಿಯನ್ನು ಮತ್ತು ಅದರೊಂದಿಗೆ ಲಗತ್ತಿಸಿದ ದಾಖಲೆಗಳ ಪಟ್ಟಿಯನ್ನು ನನಗೆ ಕೊಡಲಾಗಿರುತ್ತದೆ. ಸದರಿ ದಾಖಲೆಯನ್ನು ನಿಆರ್–3 ಎಂದು ಗುರುತಿಸಲಾಯಿತು.

3. ನಾನು ಆಂತರಿಕ ತನಿಖೆಗೆ ದಿ.02.12.2013 ರಂದು ಹಾಜರಾಗಿದ್ದೆನು ಮತ್ತು ಅದಕ್ಕೆ ಸಂಬಂಧಪಟ್ಟ ನಡವಳಿಕೆಗಳಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ನಡವಳಿಕೆಗಳನ್ನು ನೋಡುತ್ತಿದ್ದು ಅದನ್ನು ನಿಆರ್–4 ಎಂದು ಗುರುತಿಸಲಾಯಿತು. ದಿ. 02.12.2013 ರಂದು ಆಂತರಿಕ ತನಿಖೆಯನ್ನು ದಿ.19.12.2013 ರಕ್ಕೆ ಮುಂದೂಡಲಾಯಿತು ಎಂದರೆ ಸರಿ. ದಿ. 19.12.2013 ರಂದು ನನಗೆ ಬರಲು ಆಗುವುದಿಲ್ಲ ಎಂದು ನಾನು ತನಿಖಾಧಿಕಾರಿಯವರಿಗೆ ಪತ್ರವನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಆರ್–5 ಎಂದು ಗುರುತಿಸಲಾಯಿತು.

4. ನಂತರ ದಿ.04.01.2014 ರ ನೋಟೀಸ್ ನ್ನು ನೀಡಿ ಆಂತರಿಕೆ ತನಿಖೆಯನ್ನು ದಿ.08.01.2014 ಕ್ಕೆ ಮುಂದೂಡಲಂತು ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ನೋಟೀಸ್ ನ್ನು ತೋರಿಸಲಾಗಿ ಅದರ ಮೇಲೆ ತನ್ನ ಸಹಿ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ನೋಟೀಸ್ ನ್ನು ನಿಆರ್–6 ಎಂದು, ಸಾಕ್ಷಿ ಸಹಿಯನ್ನು ನಿಆರ್–6(ಎ) ಎಂದು ಗುರುತಿಸಲಾಯಿತು.

5. ದಿ. 08.01.2014 ರ ತನಿಖಾ ನಡಾವಳಿಗೆ ನಾನು ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸದರಿ ತನಿಖಾ ನಡಾವಳಿಯ ಮೇಲೆ ಇರುವ ಸಹಿಗಳನ್ನು ಗುರುತಿಸಿದ್ದು ಸದರಿ ನಡಾವಳಿಯನ್ನು ನಿಆರ್–7 ಎಂದು, ಸಾಕ್ಷಿ ಸಹಿಯನ್ನು ನಿಆರ್–7(ಎ) ಮತ್ತು ನಿಆರ್–7(ಬಿ) ಎಂದು ಗುರುತಿಸಲಾಯಿತು.

6. ನಿಆರ್–4 ಮತ್ತು ನಿಆರ್–7 ರ ನಡಾವಳಿಯ ಪ್ರತಿಗಳನ್ನು ನನಗೆ ನೀಡಲಾಗಿರುತ್ತದೆ. ದಿ. 16.05.2014 ರ ನೋಟೀಸ್ ನ್ನು ನನಗೆ ಕೊಟ್ಟಿರುತ್ತಾರೆ. ಸದರಿ ನೋಟೀಸ್ ನ್ನು ಈಗ

ನೋಡುತ್ತಿದ್ದು ಅದನ್ನು ನಿಆರ್‌-8 ಎಂದು, ಸಾಕ್ಷಿ ಸಹಿಯನ್ನು ನಿಆರ್‌-8(ಎ) ಎಂದು ಗುರುತಿಸಲಾಯಿತು.

7. ದಿ. 01.07.2014 ರ ನೋಟೀಸ್‌ ನ್ನು ನನಗೆ ನೊಂದಣಿ ಅಂಚೆ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಈಗ ತೋರಿಸಿದ ಅಂಚೆ ಸ್ವೀಕೃತಿ ಪತ್ರದ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್‌ ನ್ನು ಈಗ ನೋಡುತ್ತಿದ್ದು ಅದನ್ನು ನಿಆರ್‌- 9 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್‌- 10 ಎಂದು ಸಾಕ್ಷಿ ಸಹಿಯನ್ನು ನಿಆರ್‌- 10(ಎ) ಎಂದು ಗುರುತಿಸಲಾಯಿತು.

8. ದಿ. 16.07.2014 ರ ನೋಟೀಸ್‌ ನ್ನು ನನಗೆ ನೊಂದಣಿ ಅಂಚೆ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಈಗ ತೋರಿಸಿದ ಅಂಚೆ ಸ್ವೀಕೃತಿ ಪತ್ರದ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್‌ ನ್ನು ಈಗ ನೋಡುತ್ತಿದ್ದು ಅದನ್ನು ನಿಆರ್‌- 11 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್‌- 12 ಎಂದು ಸಾಕ್ಷಿ ಸಹಿಯನ್ನು ನಿಆರ್‌- 12(ಎ) ಎಂದು ಗುರುತಿಸಲಾಯಿತು.

9. ದಿ. 07.08.2014 ರ ನೋಟೀಸ್‌ ನ್ನು ನನಗೆ ನೊಂದಣಿ ಅಂಚೆ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ಈಗ ತೋರಿಸಿದ ಅಂಚೆ ಸ್ವೀಕೃತಿ ಪತ್ರದ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್‌ ನ್ನು ಈಗ ನೋಡುತ್ತಿದ್ದು ಅದನ್ನು ನಿಆರ್‌- 13 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್‌- 14 ಎಂದು ಸಾಕ್ಷಿ ಸಹಿಯನ್ನು ನಿಆರ್‌- 14(ಎ) ಎಂದು ಗುರುತಿಸಲಾಯಿತು.

(ಈಗ ಸಮಯ 2.00 ಗಂಟೆ ಆಗಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

**ಸಾಕ್ಷಿಯನ್ನು ಪುನಃ ಮಧ್ಯಾಹ್ನ 3.05 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಕೆ.ಎಸ್.ಬಿ ವಕೀಲರಿಂದಃ**

10. ಸಾಕ್ಷಿಗೆ 2 ನೇ ಕಾರಣ ಕೇಳಿ ನೋಟೀಸ್‌ ನ್ನು ತೋರಿಸಿದ್ದು ಅದನ್ನು ಒಪ್ಪಿಕೊಂಡಿರುತ್ತಾರೆ ಆದ್ದರಿಂದ ಅದನ್ನು ನಿಆರ್‌- 15 ಎಂದು ಗುರುತಿಸಲಾಯಿತು. ನಿಆರ್‌- 15 ಕ್ಕೆ ನಾನು ಉತ್ತರವನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ಸದರಿ ಉತ್ತರವನ್ನು ತೋರಿಸಲಾಗಿ ಅದು ತಾನು ಕೊಟ್ಟ ಉತ್ತರ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಉತ್ತರವನ್ನು ನಿಆರ್‌- 16 ಎಂದು, ಸಾಕ್ಷಿ ಸಹಿಯನ್ನು ನಿಆರ್‌- 16(ಎ) ಎಂದು ಗುರುತಿಸಲಾಯಿತು.

11. ನಿಆರ್–8, ನಿಆರ್–9, ನಿಆರ್–11 ಮತ್ತು ನಿಆರ್–13 ರಲ್ಲಿ ನನಗೆ ತನಿಖೆಗೆ ಬರಬೇಕು ಎಂದು ತಿಳಿಸಿದರು ಕೂಡ ನಾನು ಹಾಜರಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ನನಗೆ ಪ್ರಭಾರ ಪ್ರಾಂಶುಪಾಲರಾದ ಪ್ರಶಾಂತ್ ಕುಮಾರ್ ಕೆ ಇವರು ಅನುಮತಿಯನ್ನು ನೀಡದೇ ಇದುದ್ದರಿಂದ ನಾನು ಆಂತರಿಕ ತನಿಖೆಗೆ ಹಾಜರಾಗಿರಲಿಲ್ಲ ಎಂದು ಹೇಳಿರುತ್ತಾರೆ. ನಾನು ಪ್ರಾಂಶುಪಾಲರನ್ನು ಮೌಖಿಕವಾಗಿ ಅನುಮತಿಯನ್ನು ಕೋರಿದ್ದೆನು.

12. ಪ್ರಾಂಶುಪಾಲರು ತನಿಖೆಗೆ ಹಾಜರಾಗಲು ಅನುಮತಿಯನ್ನು ಕೊಟ್ಟಿರುವುದಿಲ್ಲ ಎಂದು ನಾನು ತನಿಖಾಧಿಕಾರಿಗಾಗಲಿ ಅಥವಾ 1 ಮತ್ತು 2 ನೇ ಎದುರುದಾರರಿಗಾಗಲಿ ಲಿಖಿತವಾಗಿ ತಿಳಿಸಿರುವುದಿಲ್ಲ. ತನಿಖಾ ವರದಿ ಬಂದ ನಂತರ ಪ್ರಾಂಶುಪಾಲರು ತನಿಖೆಗೆ ಹಾಜರಾಗಲು ಅನುಮತಿಯನ್ನು ಕೊಟ್ಟಿರುವುದಿಲ್ಲ ಎಂದು ನಾನು ತನಿಖಾಧಿಕಾರಿಗಾಗಲಿ ಅಥವಾ 1 ಮತ್ತು 2 ನೇ ಎದುರುದಾರರಿಗಾಗಲಿ ಲಿಖಿತವಾಗಿ ತಿಳಿಸಿರುವುದಿಲ್ಲ. ಪ್ರಾಂಶುಪಾಲರು ತನಿಖೆಗೆ ಹಾಜರಾಗಲು ಅನುಮತಿಯನ್ನು ಕೊಟ್ಟಿರುವುದಿಲ್ಲ ಎಂದು ನಾನು ಈ ಅಪೀಲ್ ಮೆಮೊದಲ್ಲಿ ಮೊಟ್ಟ ಮೊದಲ ಬಾರಿಗೆ ಹೇಳಿರುತ್ತೇನೆ ಎಂದರೆ ಸರಿ.

13. 1 ಮತ್ತು 2 ನೇ ಎದುರುದಾರರು ಪ್ರಾಶುಂಪಾಲರ ಪರವಾನಗೆಯನ್ನು ಪಡೆದುಕೊಂಡು ಬಂದು ತನಿಖೆಗೆ ಹಾಜರಾಗಬೇಕು ಎಂದು ತಿಳಿಸಿರಲಿಲ್ಲ. ಆಂತರಿಕ ತನಿಖೆಯನ್ನು ಎನ್.ಎಂ.ಎ.ಎಂ. ಕ್ಯಾಂಪಸ್‌ನ ಒಳಗಿರುವ ಕಟ್ಟಡದಲ್ಲಿ ನಡೆಸಲಾಗಿರುತ್ತದೆ ಎಂದರೆ ಸರಿ. ಎನ್.ಎಂ.ಎ.ಎಂ. ಮತ್ತು ಎನ್.ಆರ್.ಎ.ಎಂ.ಪಿ ಕಟ್ಟಡಗಳು ಒಂದೇ ಕ್ಯಾಂಪಸ್ ನಲ್ಲಿ ಇರುತ್ತವೆ.

14. 3 ಮತ್ತು 4 ನೇ ಎದುರುದಾರರುಗಳು ನೀಡಿದ ಸೇವಾ ನಿಯಮಗಳಲ್ಲಿ ಗ್ರಾಂಟ್ ಇನ್ ಏಡ್ ಕೋಡ್ ಬಗ್ಗೆ ಇರುತ್ತದೆ ಮತ್ತು ಆ ಪ್ರಕಾರ ಕಮಿಟಿಯನ್ನು ಸ್ಥಾಪಿಸಿ ಆಂತರಿಕ ತನಿಖೆಯನ್ನು ಮಾಡಬೇಕಾಗುತ್ತದೆ. ಸದರಿ ಗ್ರಾಂಟ್ ಇನ್ ಏಡ್ ಕೋಡ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿರಾ ಎಂದರೆ ಸಾಕ್ಷಿಯು 2 ನೇ ಎದುರುದಾರರ ಕಚೇರಿಯಲ್ಲಿ ಅದು ಇರುತ್ತದೆ ಮತ್ತು ನಾನು ಈಗ ಸೇವೆಯಲ್ಲಿ ಇಲ್ಲದೇ ಇದುದ್ದರಿಂದ ಅದನ್ನು ಪಡೆದುಕೊಂಡು ಹಾಜರುಪಡಿಸಲು ಸಾಧ್ಯವಾಗುವುದಿಲ್ಲ.

15. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 2 ರಲ್ಲಿ ಕಾಣಿಸಬೇಕಾಗಿದ್ದ ಸೇವಾ ನಿಯಮಗಳು ಗ್ರಾಂಟ್ ಇನ್ ಏಡ್ ಕೋಡ್ ನಿಯಮಗಳು ಇರುತ್ತವೆ. ನಾನು ಗ್ರಾಂಟ್ ಇನ್ ಏಡ್ ಗೆ ಒಳಪಡುವ ಉಪನ್ಯಾಸಕನಾಗಿರುತ್ತೇನೆ. ಚಾರ್ಜ್ ಶೀಟ್ ನ್ನು ಕೊಟ್ಟ ನಂತರ ಶ್ರೀ ಯು.ಎನ್. ಖಂಡಿಗೆ ವಕೀಲರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿದ ಬಗ್ಗೆ ನಾನು ಲಿಖಿತವಾಗಿ 1 ಮತ್ತು 2 ನೇ ಎದುರುದಾರರಿಗೆ ಪತ್ರವನ್ನು ಬರೆದಿರುವುದಿಲ್ಲ.

16. ನನ್ನ ಪ್ರಕಾರ ಗ್ರಾಂಟ್ ಇನ್ ಏಡ್ ಕೋಡ್ ನಿಯಮಗಳು ನನಗೆ ಅನ್ವಯಿಸುತ್ತದೆ. ನನಗೆ ಸಾಕಷ್ಟು ಅವಕಾಶಗಳನ್ನು ನನ್ನ ಪ್ರತಿ ರಕ್ಷೆಗಾಗಿ ನೀಡಿದ್ದರೂ ಕೂಡ ಆಂತರಿಕ ತನಿಖೆಗೆ ಹಾಜರಾಗಿರಲಿಲ್ಲ ಎಂದರೆ ಸಾಕ್ಷಿಯು ಪ್ರಾಂಶುಪಾಲರು ಅನುಮತಿಯನ್ನು ನೀಡದೇ ಇದುದ್ದರಿಂದ

ಹಾಜರಾಗಿರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರಾಂಶುಪಾಲರು ಅನುಮತಿಯನ್ನು ನಿರಾಕರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಆಂತರಿಕ ತನಿಖೆಯನ್ನು ನೈಸರ್ಗಿಕ ನಿಯಮಗಳ ಪ್ರಕಾರ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯು ಉದ್ದೇಶಪೂರಕವಾಗಿ 1 ಮತ್ತು 2 ನೇ ಎದರುದಾರರುಗಳ ಪರವಾಗಿ ತನಿಖೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು 3 ಮತ್ತು 4 ನೇ ಎದುರುದಾರರ ಪರವಾಗಿ ಆಂತರಿಕೆ ತನಿಖೆಯಲ್ಲಿ ಯಾರು ಇಲ್ಲದೇ ಇದುದ್ದರಿಂದ 1 ಮತ್ತು 2 ನೇ ಎದುರುದಾರರ ಪರವಾಗಿ ಮಾಡಲಾಗಿರುತ್ತದೆ ಎಂದು ಹೇಳುತ್ತಿದ್ದೇನೆ.

18. ಆಂತರಿಕ ತನಿಖೆಗಾಗಿ ಸಮಿತಿಯನ್ನು ರಚನೆ ಮಾಡಬೇಕು ಎನ್ನುವುದರಬಗ್ಗೆ ಯಾವುದೇ ನಿಯಮಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆಂತರಿಕ ತನಿಖೆಯಲ್ಲಿ ಯಾವುದೇ ನ್ಯೂನ್ಯತೆ ಇರುವುದಿಲ್ಲ ಮತ್ತು ಅದನ್ನು ಸರಿಯಾಗಿ ಮಾಡಲಾಗಿರುತ್ತದೆ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿ ಮುಂದೆ 1 ಮತ್ತು 2 ನೇ ಅರ್ಜಿದಾರರು ಬೆರಳಚ್ಚು ತಜ್ಞರನ್ನು ನೇಮಕ ಮಾಡಬೇಕು ಎಂದು ಸಲ್ಲಿಸಿದ್ದು ಅದನ್ನು ನಾನು ನನ್ನ ತಕರಾರು ಇರುವುದಿಲ್ಲ ಎಂದು ಹಿಂಬರಹವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಕೆ.ಎಸ್.ಬಿ. ಮತ್ತು ಶ್ರೀ ಡಿ.ಜಿ.ಪಿ ವಕೀಲರಿಂದಃ**

19. 3 ಮತ್ತು 4 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.